**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>**

ಸಿ.ಸಿ. ನಂ.29/2022

ಪಿಡಬ್ಲ್ಯೂ: 01

ಪ್ರಮಾಣವಚನ ಭೋಧಿಸಲಾಯಿತು. ದಿಃ 10.07.2023.

ಹೆಸರು : ಶ್ರೀ. ಶಾಂತಮಲ್ಲಪ್ಪ

ತಂ/ಗಂ ಹೆಸರು: ಶ್ರೀ. ರೇವಣಸಿದ್ದಪ್ಪ

ವಯಸ್ಸು : 52 ವರ್ಷ

ಉದ್ಯೋಗ : ಎಎಸ್ಐ ಪೊಲೀಸ್ ಠಾಣೆ ನರೋಣಾ.

ವಾಸಸ್ಥಳ : ನರೋಣಾ.

---

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ.299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆ:</u>**

**<u>ಮುಖ್ಯ ವಿಚಾರಣೆ:</u>** <u>ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:</u>

ನಾನು 2015 ರಿಂದ 2018 ರವರೆಗೆ ಆಳಂದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ನಾನು ಆಳಂದ ಪೊಲೀಸ್ ಠಾಣೆಯ ಪಿಐ ರವರು ಪ್ರೋಕ್ಷಮೇಷನ್ ಜಾರಿಮಾಡುವಂತೆ ತಿಳಿಸಿದರು. ಅದರಂತೆ ನಾನು ಈ ಪ್ರಕರಣದ ಆರೋಪಿಯಾದ ಮಹ್ಮದ್ ರಫೀಕ್ ತಂದೆ ಮಹ್ಮದ್ ಪಾಷಾಮಿಯಾ ಈತನ ವಿರುದ್ಧ ಪ್ರೋಕ್ಲಮೇಷನ್ ಜಾರಿ ಮಾಡಿರುತ್ತೇನೆ.

ದಿಃ 01.03.2018 ರಂದು ಈ ಪ್ರಕರಣದ ಸದರಿ ಆರೋಪಿಯು ಸದ್ಯ ವಾಸಿಸುತ್ತಿರುವ ಕಲಬುರಗಿಯ ಅಂಬಿಕಾನಗರದಲ್ಲಿ ಪ್ರೋಕ್ಲಮೇಷನ್‌ನ್ನು ಪಂಚರಾದ ಅಣ್ಣಪ್ಪ ಮತ್ತು ಸಲಾಉದ್ದಿನ್ ರವರ ಸಮಕ್ಷಮದಲ್ಲಿ ಪ್ರೋಕ್ಲಮೇಷನ್ ಪ್ರತಿಗಳನ್ನು ಸಾರ್ವಜನಿಕ ಜಾಗವಾದ

ನೀರಿನ ಟ್ಯಾಂಕ್‌ಗೆ, ಆಟೋ ಸ್ಟ್ಯಾಂಡ್ ಹತ್ತಿರ ಕಂಬಕ್ಕೆ ಅಂಟಿಸಿ, ಅಲ್ಲಿದ್ದ ಜನರಿಗೆ ಆರೋಪಿ ಅಂಬಿಕಾ ನಗರಕ್ಕೆ ಬಂದರೆ ನ್ಯಾಯಾಲಯಕ್ಕೆ ಬಂದು ಹಾಜರಾಗುವಂತೆ ತಿಳಿಸಿ, ಪ್ರೋಕ್ಲಮೇಷನ್‌ನ್ನು ಇಬ್ಬರು ಪಂಚರ ಸಮಕ್ಷಮದಲ್ಲಿ ಪ್ರೋಕ್ಲಮೇಷನ್ ಪ್ರತಿಯನ್ನು ಹಚ್ಚಿ ಬೆಳಿಗ್ಗೆ 10.00 ರಿಂದ 12.00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತೇನೆ. ಈ ಬಗ್ಗೆ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿದ್ದು, ವರದಿಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಇಬ್ಬರು ಪಂಚರ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-1(ಸಿ) ಎಂದು, ಉದ್ಘೋಷಣಾ ಪ್ರತಿಯನ್ನು ನಿಪಿ-2 ಎಂದು, ಜಪ್ತಿ ಆದೇಶವನ್ನು ನಿಪಿ-3 ಎಂದು, ದಸ್ತಗಿರಿ ವಾರೆಂಟ್‌ನ್ನು ನಿಪಿ-4 ಎಂದು, ಆರೋಪಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ಕಲುಬರಗಿ ಮಹಾನಗರ ಪಾಲಿಕೆ ರವರು ನೀಡಿದ ಪತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ನ್ಯಾಯಾಲಯ, ಆಳಂದ.